ಶ್ರೀ ಎಚ್. ಎಂ. ಚನ್ನಬಸಪ್ಪ.—ಮುನಿಸಿಪಾಲಿಟಿಯವರು ಕೊಡಬೇಕಾಗಿರುತ್ತದೆ.

ಶ್ರೀ ಟಿ. ಎಂ. ಮಂಜುನಾಥ್.—50, 50 ಬಾಕಿ ಕೊಡಬೇಕಾಗಿದೆ ಎಂದು ಹೇಳಿದ್ದೀರಿ, ಬಾಕಿ ಕೊಡದಿದ್ದರೆ ಬಿಲ್ಡಿಂಗ್ ಕೊಡುವುದಿಲ್ಲವೇ ?.

ಶ್ರೀ ಎಚ್. ಎಂ. ಚನ್ನಬಸಪ್ಪ —ಕಾನೂನು ಪ್ರಕಾರವಾಗಿ ಅವರ ಕರ್ತವ್ಯವನ್ನು ಅವರು ನಿರ್ವಹಣೆ ಮಾಡದೆ ಹೋದ ಪಕ್ಷದಲ್ಲಿ ಸರ್ಕಾರವೇ ತನ್ನ ಕೈಗೆ ತೆಗೆದುಕೊಂಡು ಮಾಡುವ ಅಧಿಕಾರವೂ ಇರುತ್ತದೆ

ಶ್ರೀ ಪಿ. ಎಂ. ಭಾಂಗಿ.—ಹೆಚ್ಚಿನ ಹಣ ಕೊಡುವ ಬಗ್ಗೆ ಸರ್ಕಾರದವರ ಪರವಾಗಿ ಮುನಿಸಿಪಾಲಿಟಿಯವರಿಗೆ ತಾವು ಏನಾದರೂ ಕಾಗದವನ್ನು ಬರೆದು ತಿಳಿಸಿದ್ದೀರಾ ? ಅವರು ಕೊಡುವುದಿಲ್ಲವೆಂದು ಹೇಗೆ ಅರ್ಥವಾಗುತ್ತದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ —ಒಂದಾಜಿನ ಪ್ರಕಾರ ಎಷ್ಟು ಬಾಕಿಯನ್ನು ಕೊಡಬೇಕಾಗಿರುತ್ತದೆ ಅಷ್ಟು ಹಣವನ್ನು ಕೊಡಬೇಕಾಗುತ್ತದೆಂದು ನಲಹಾ ನಮೂನೆಗಳಿಗೆ ಬರೆದಿದ್ದೇವೆ.

Rural Electrification in Chamarajanagar Taluk

268. SRI K. SIDDAIAH (Santhemarahally)—Will the Minister of State for Information and Power be pleased to state:—

(*a*) the number of villages electrified in Chamarajanagar Taluk by the end of March 1976 ;

(*b*) out of them, the number of villages where connections for street lights have been disconnected for more than (1) one year and (2) six months ?

SRI SUBBAYYA SHETTY. (Minister of State for Information and Power).—

(*a*) 125 villages.

(*b*) 60 Villages ; but none during the last six months.

ಶ್ರೀ ಕೆ. ಸಿದ್ದಯ್ಯ —ಚಾಮರಾಜನಗರದಲ್ಲಿ 125 ಹಳ್ಳಿಗಳಲ್ಲಿ 65 ಹಳ್ಳಿಗಳಿಗೆ ವಿದ್ಯುತ್ ದೀಪಗಳೇ ಇಲ್ಲ ಅಂದರೆ ಅರ್ಧದಷ್ಟು ಹಳ್ಳಿಗಳಿಗೆ ದೀಪಗಳು ಇರುವುದಿಲ್ಲ. ಇಂಥ ಅಭಾವ ಪರಿಸ್ಥಿತಿಯಲ್ಲಿ ನೀರಾವರಿ ಪಂಪುಸೆಟ್ಟುಗಳಿಗಾದರೂ ತಾತ್ಕಾಲಿಕವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುತ್ತೀಕರಣ ಮಾಡುವುದಕ್ಕೆ ಪರಿಶೀಲನೆ ಮಾಡುತ್ತೀರಾ ?.

† ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಬೀದಿ ದೀಪಗಳನ್ನು ಮಾತ್ರ 60 ಗ್ರಾಮಗಳಲ್ಲಿ ಡಿಸ್‌ಕನೆಕ್ಟ್ ಮಾಡಿದ್ದೇವೆ ಏಕಕ್ಕೆಂದರೆ ನಾನ್‌ಪೇಮೆಂಟ್ ಆಫ್ ಎರೆಕ್ಟ್ರಿಸಿಟಿ ಚಾರ್ಜಸ್‌ಗೋಸ್ಕರ.

ಶ್ರೀ ಕೆ. ಸಿದ್ದಯ್ಯ —ತಾವು ಹೇಳುವುದು ಸರಿಯಾಗಿರುತ್ತದೆ. ಆದರೆ ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿಯನ್ನು ಸರಬರಾಜುಮಾಡಿರತಕ್ಕಂಥ ಉದ್ದೇಶ ವಿಫಲವಾಗಿ ಜನಗಳಿಗೆ ತೊಂದರೆಯಾಗುತ್ತಿದೆ. ವಿದ್ಯುಚ್ಛಕ್ತಿಗಾಗಿ ಇಷ್ಟೊಂದು ಹಣವನ್ನು ಖರ್ಚುಮಾಡಿ ಹಾಕಿದ್ದರೂ ಇಂಥ ಅಭಾವಪರಿಸ್ಥಿತಿಯಲ್ಲಿ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟರೆ ಬಹಳ ಉಪಯೋಗವಾಗುತ್ತದೆ. ಎಸ್ಟೋ ಉತ್ಪಾದನೆಯೂ ಆಗುತ್ತದೆ. ಆದ್ದರಿಂದ ಇದನ್ನು ಪರಿಶೀಲನೆ ಮಾಡುತ್ತೀರಾ ಎಂದು ಸರ್ಕಾರವನ್ನು ಕೇಳುತ್ತಿದ್ದೇನೆ ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ – ತಾವು ಏನು ಹೇಳುತ್ತಿದ್ದೀರಿ ಎಂದರೆ ವಿಲೇಜಸ್‌ಗೆ ಕೊಡುತ್ತಿರುವ ಎರೆಕ್ಟ್ರಿಸಿಟಿಯನ್ನು ನಿಲ್ಲಿಸಿಬಿಟ್ಟು, ನೀರಾವರಿ ಪಂಪುಸೆಟ್ಟುಗಳಿಗೆ ಎರೆಕ್ಟ್ರಿಸಿಟಿಯನ್ನು ಒದಗಿಸಿ ಎಂದು ಹೇಳುತ್ತಿರುವಂತೆ ಕಾಣುತ್ತದೆ, ಅದನ್ನು ಪರಿಶೀಲನೆ ಮಾಡುತ್ತೇನೆ.